ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

<u>ಸಿ.ಸಿ.ನಂ.**3745/2023.**</u>

ದಿನಾಂಕಃ**07.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಸುನಿತಾ | ಚಾಸಾ-1, ಪ್ರಾಸ-1 |
| ಗಂಡನ ಹೆಸರು | ಯಶ್ವಂತ್ | |
| ವಯಸ್ಸು | 32 ವರ್ಷ | |
| ಉದ್ಯೋಗ | ಗೃಹಿಣಿ | |
| ವಾಸ | ಕೋಡಿಹಳ್ಳಿ ಗ್ರಾಮ ಕಡೂರು ತಾಲ್ಲೂಕು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 2, 3 ನನಗೆ ಗೊತ್ತು. ಚಾಸಾ 4-5 ನನ್ನ ತಂದೆ-ತಾಯಿ. ಚಾಸಾ 6 ನನ್ನ ಅಣ್ಣ. ಚಾಸಾ 7 ನನ್ನ ದೊಡ್ಡಪ್ಪ. ಚಾಸಾ 8 ನನ್ನ ಚಿಕ್ಕಪ್ಪ. ಚಾಸಾ 9 ಮತ್ತು 10 ನನ್ನ ಸಂಬಂಧಿಕರು. 1 ನೇ ಆರೋಪಿ ನನ್ನ ಗಂಡ. 2 ಮತ್ತು 3 ನೇ ಆರೋಪಿತರು ನನ್ನ ಮಾವ-ಅತ್ತೆ.

ನನ್ನ ಮತ್ತು 1 ನೇ ಆರೋಪಿಯ ಮದುವೆಯು ದಿಃ12.08.2017 ಮತ್ತು ದಿಃ13.08.2017 ರಂದು ಕಡೂರಿನ ಕೋಟೆಯಲ್ಲಿರುವ ಶಾರಾದ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ನಮ್ಮ ಮದುವೆಗೂ 2 ತಿಂಗಳ ಮುನ್ನ ಮಾತುಕತೆಯಾಗಿರುತ್ತದೆ. ಸದರಿ ಮದುವೆಯ ಮಾತುಕತೆಯಲ್ಲಿ ನನ್ನ ಮನೆಯವರ ಪೈಕಿ ನನ್ನ ತಂದೆ, ಅಣ್ಣ, ದೊಡ್ಡಪ್ಪ, ಚಿಕ್ಕಪ್ಪ ಮತ್ತು ಸಂಬಂಧಿಕರು ಹೋಗಿದ್ದೆವು ಹಾಗೂ ಆರೋಪಿತರ ಕುಟುಂಬದ ಪೈಕಿ ಆರೋಪಿಗಳು ಮತ್ತು ಅವರ ಸಂಬಂಧಿಕರು ಇದ್ದರು. ಸದರಿ ಮಾತುಕತೆಯಲ್ಲಿ ಆರೋಪಿತರ ಕುಟುಂಬದವರು ವರದಕ್ಷಿಣೆಯಾಗಿ ರೂ.10 ಲಕ್ಷ ಹಣ, 60 ಗ್ರಾಂ ಚಿನ್ನದ ಬೇಡಿಕೆ ಇಟ್ಟಿದ್ದರು, ಆದರೆ ನನ್ನ ತಂದೆ ಅಷ್ಟು ಕೊಡಲು ಶಕ್ತನಲ್ಲ ನಾನು 25 ಗ್ರಾಂ ಚಿನ್ನ ಹಾಗೂ ರೂ.5 ಲಕ್ಷ ಹಣ ನೀಡುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ ಎಂಬುದಾಗಿ ತೀರ್ಮಾನವಾಗಿದೆ ಎಂದು ನನ್ನ ತಂದೆ ಮನೆಗೆ ಬಂದ ನಂತರ ನನಗೆ ತಿಳಿಸಿರುತ್ತಾರೆ.

ಮಾತುಕತೆಯಂತೆ ಮದುವೆಯ 1 ದಿನ ಮುಂಚೆ ರೂ.5 ಲಕ್ಷ ಹಣವನ್ನು ನನ್ನ ತಂದೆ 2 ನೇ ಆರೋಪಿಗೆ ನೀಡಿರುತ್ತಾರೆ ಹಾಗೂ 25 ಗ್ರಾಂ ಚಿನ್ನವಾದ 15 ಗ್ರಾಂ ಕೊರಳಚೈನ್ ಹಾಗೂ 10 ಗ್ರಾಂ ಉಂಗುರವನ್ನು ಉಂಗುರವನ್ನು 1 ನೇ ಆರೋಪಿಗೆ ಮದುವೆಯ ದಿನ ಹಾಕಿರುತ್ತೇವೆ.

ಮದುವೆಯ ನಂತರ 1 ನೇ ಆರೋಪಿ ಸುಮಾರು 5 ತಿಂಗಳ ವರೆಗೂ ನನ್ನನ್ನು ಚೆನ್ನಾಗಿ ನೋಡಿಕೊಂಡರು ಅಷ್ಟೇ. ನಂತರ ಆರೋಪಿತರು ಸೇರಿಕೊಂಡು ನನ್ನ ತಂದೆಯಿಂದ ನನ್ನ ಗಂಡನಿಗೆ ಒಂದು ಸೈಟು ಕೊಡಿಸು ಎಂದು ನನ್ನ ಜೊತೆ ಜಗಳ ಮಾಡಿರುತ್ತಾರೆ. ಆಗ ನಾನು ನನ್ನ ತವರಿನಲ್ಲಿ ಒಬ್ಬ ಅಣ್ಣ ಸಹ ಇದ್ದಾನೆ ನಾನು ನೀವು ಹೇಳಿದಂತೆ ಸೈಟು ಕೇಳಲಾಗುವುದಿಲ್ಲ ಎಂದು ಹೇಳಿದೆ. ಆಗ 2 ನೇ ಆರೋಪಿಯು ಅದೇ ಕಾರಣವನ್ನು ಇಟ್ಟುಕೊಂಡು ಸೈಟು ಕೊಡದಿದ್ದರೆ ಆಕೆಗೆ ವಿವಾಹ ವಿಚ್ಛೇದನ ನೀಡು ಎಂದು ನನಗೆ ಬೆದರಿಸುತ್ತಿದ್ದರು. ಇದೇ ವಿಚಾರಕ್ಕೆ ಇನ್ನೊಮ್ಮೆ ಆರೋಪಿತರು ನನ್ನೊಂದಿಗೆ ಜಗಳ ಮಾಡಿ 1 ನೇ ಆರೋಪಿ ನನಗೆ ಅವಾಚ್ಯವಾಗಿ ಬೈದು ಕೈನಿಂದ ಹೊಡೆದಿರುತ್ತಾರೆ, 3 ನೇ ಆರೋಪಿಯು ಲೌಡಿ ಸಾಯಿಸು ಅವಳನ್ನು ಎಂದು 1 ನೇ ಆರೋಪಿ ಪ್ರಚೋದನೆ ನೀಡಿರುತ್ತಾರೆ. ಈ ಜಗಳದ ವಿಚಾರವನ್ನು ನಾನು ನನ್ನ ಅಣ್ಣನಿಗೆ ಫೋನ್ ಮಾಡಿ ತಿಳಿಸಿರುತ್ತೇನೆ. ಆಗ ನನ್ನ ಅಣ್ಣ ಆರೋಪಿತರ ಮನೆಗೆ ಬಂದು ವಿಚಾರಿಸಿದಾಗ ಆರೋಪಿತರು ನಿನ್ನ ಅಣ್ಣನಿಗೆ ಹೇಳುತ್ತಿಯಾ ಎಂದು ನನಗೆ ಬೈದು ಇನ್ನೊಮ್ಮೆ ಹೇಳಿದರೆ ನಿನಗೆ ಸೀಮೆಎಣ್ಣೆ ಹಾಕಿ ಸುಟ್ಟುಹಾಕುತ್ತೇವೆ ಎಂದು ಎದರಿಸಿರುತ್ತಾರೆ.

ಆರೋಪಿತರ ಮನೆಯ ಪಕ್ಕದ ಮನೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಪೊಲೀಸ್ ಕುಟುಂಬದವರು ಇದ್ದರು. ಆ ಪೊಲೀಸ್ ಬಂದು ಗಲಾಟೆ ಬಿಡಿಸಿದರು. ನಂತರ ಪೊಲೀಸರಿಗೆ ಕರೆ ಮಾಡಿ ಮನೆಯ ಬಳಿ ಪೊಲೀಸರು ಬಂದ ನಂತರ 1 ನೇ ಆರೋಪಿಯು ಕೇಸು ಆಗುತ್ತೆ ಎಂದು ಎದರಿಕೊಂಡು ನಾನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಬೇರೆ ಮನೆ ಮಾಡಿ ಅವಳಿಗೆ ಇಡುತ್ತೇನೆ ಎಂದು ಒಪ್ಪಿಕೊಂಡರು. ನಂತರ ಕಡೂರಿನ ಸಾಹಿತ್ಯ ನಗರದಲ್ಲಿ ಬೇರೆ ಮನೆ ಮಾಡಿದರು. ಬೇರೆ ಮನೆ ಮಾಡಿಕೊಟ್ಟರು ಆದರೆ 1 ನೇ

ಆರೋಪಿಯು ಸರಿಯಾಗಿ ಮನೆಗೆ ಬರುತ್ತಿರಲಿಲ್ಲ ಹಾಗೂ ಮಗುವಿಗೂ ಸಹಃ ಬೇಕಿದ್ದ ವಸ್ತುಗಳನ್ನು ತಂದುಕೊಟ್ಟಿರುವುದಿಲ್ಲ. ಈ ವರೆಗೂ ಸಹ ಮಗುವನ್ನು ಪ್ರೀತಿಯಿಂದ ಮಾತನಾಡಿಸಿರುವುದಿಲ್ಲ. ಕಡೂರಿನಲ್ಲಿ ಬೇರೆ ಬಾಡಿಗೆ ಮನೆಯಲ್ಲಿ ಇದ್ದಾಗ ಒಂದು ದಿನ 60 ಸಾವಿರ ಲೋನ್ ತೆಗೆದುಕೊಳ್ಳಬೇಕು ತಾಳಿ ಸರ ಕೊಡು ಎಂದು ಕೇಳಿದರು, ನಾನು ಅದಕ್ಕೆ ನಿರಾಕರಿಸಿದ್ದೆ, ಅದಕ್ಕೆ ಆರೋಪಿಯು ನಾನು ಮಲಗಿದ್ದಾಗ ಚಿನ್ನದ ತಾಳಿ ಸರವನ್ನು ಕಟ್ಟ ಮಾಡಿಕೊಂಡು ತೆಗೆದುಕೊಂಡು ಹೋಗಿರುತ್ತಾರೆ. ನಾನು 1 ನೇ ಆರೋಪಿಯನ್ನು ಸರ ಕೇಳಿದರೆ ಅದನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳಿದರು. ಆ ಸಮಯದಲ್ಲಿ ನಾನು 3 ತಿಂಗಳ ಗರ್ಬಿಣಿಯಾಗಿದ್ದೆ. ಆಗ ಆರೋಪಿಯು ಜ್ಯೂಸಿನಲ್ಲಿ ಗರ್ಭಪಾತವಾಗುವಂತಹಃ ಮಾತ್ರೆ ಬೆರಸಿಕೊಟ್ಟು ಕುಡಿಸಿ ಗರ್ಭಪಾತವಾಗುವಂತೆ ಮಾಡಿರುತ್ತಾರೆ. ಆ ನಂತರ ನನಗೆ ನನ್ನ ತವರು ಮನೆಗೆ ಹೋಗು ಎಂದು ಮನೆಯಿಂದ ಕಳುಹಿಸಿದರು.

ನಂತರ, ಚಿನ್ನದ ತಾಳಿ ಸರ ಕೊಡಿಸುತ್ತೇನೆ ಎಂದು ಹೇಳಿ ಕೋಡಿಸಿರುವುದಿಲ್ಲ. ಆ ನಂತರ 1 ನೇ ಆರೋಪಿಯು ಮನೆಗೆ ಬರುತ್ತಿರಲಿಲ್ಲ. ನನ್ನ ಮೇಲೆ 1 ನೇ ಆರೋಪಿಯು ಸಂಶಯ ಪಡುತ್ತಿದ್ದರು. ನಂತರ ಬಾಡಿಗೆ ಮನೆಯ ಮಾಲೀಕರಿಗೆ 1 ನೇ ಆರೋಪಿಯು ಪೋನ್ ಮಾಡಿ ನಾನು ಬಾಡಿಗೆ ಹಣ ನೀಡುವುದಿಲ್ಲ ಆಕೆಯಿಂದಲೇ ಬಾಡಿಗೆ ಹಣ ಪಡೆದುಕೊಳ್ಳಿ ಎಂದು ತಿಳಿಸಿದ್ದರು. ನನ್ನ ತವರಿನವರು ಮದುವೆಯ ಸಮಯದಲ್ಲಿ 1 ನೇ ಆರೋಪಿಗೆ ಬುಲೆಟ್ ಬೈಕ್ ಅನ್ನು ಕೊಡಿಸಿದ್ದರು, ಆದರೆ 1 ನೇ ಆರೋಪಿಯು ಬೈಕ್ ಅನ್ನು 2 ನೇ ಆರೋಪಿಯ ಹೆಸರಿಗೆ ಮಾಡಿಸಿಕೊಂಡು ಪೊಲೀಸ್ ಠಾಣೆಯಲ್ಲಿನಾವೇ ಖರೀಸಿದ್ದು ಎಂದು ಉಲ್ಟಾ ವಾದ ಮಾಡಿರುತ್ತಾರೆ.

ನಂತರ, ನನ್ನ ದೊಡ್ಡಪ್ಪ ನನಗೆ ಮದುವೆಯ ಸಮಯದಲ್ಲಿ ನೀಡಿದ್ದ 4 ಗ್ರಾಂ ತೂಕದ ಚಿನ್ನದ ಉಂಗುರವನ್ನು1 ನೇ ಆರೋಪಿ ತೆಗೆದುಕೊಂಡು ಹೋಗಿರುತ್ತಾರೆ. ಎಷ್ಟು ಕೇಳಿದರು ಅದನ್ನು ವಾಪಾಸ್ಸು ನೀಡಿರುವುದಿಲ್ಲ. ಅದೇ ರೀತಿ 1 ನೇ ಆರೋಪಿಯು ಮದುವೆಯ ಸಮಯದಲ್ಲಿ ನಮ್ಮಿಂದ ಬ್ರಾಸ್ ಲೈಟ್ ಅನ್ನು ಸಹಃ

ಪಡೆದುಕೊಂಡಿರುತ್ತಾರೆ.

ನಂತರ ನನ್ನ ಅಣ್ಣನಿಗೆ ಮದುವೆಯಾಗಲು ಬಿಡುವುದಿಲ್ಲ ಎಂದು ಹೇಳಿಎಷ್ಟು ಹೆಣ್ಣು ನೋಡಿದರು ಸಹಃ ಹೆಣ್ಣಿನ ಕುಟುಂಬದವರಿಗೆ ಸುಳ್ಳು ಸುಳ್ಳು ವಿಚಾರ ಹೇಳಿ ಮದುವೆಯ ನಿಶ್ಚಯವಾಗದಂತೆ ಮಾಡಿರುತ್ತಾರೆ. ನನ್ನ ತಂದೆ-ತಾಯಿ ನಮ್ಮ ಮನೆಗೆ ಬಂದರೆ ಆರೋಪಿಯು ಅವರಿಗೂ ಸಹ ಕೆಟ್ಟ ಕೆಟ್ಟದಾಗಿ ಬೈಯುತ್ತಿದ್ದರು. ನನ್ನ ತವರಿನಿಂದ ಹರಿಶಣ-ಕುಂಕುಮ ತೆಗೆದುಕೊಂಡು ಬಂದರೆ ಅದನ್ನು ಬೀದಿಗೆ ಬೀಸಾಕುತ್ತೇನೆ ಎಂದು 2 ನೇ ಆರೋಪಿಯು ಬೈದಿರುತ್ತಾರೆ. ಆಗಾಗಿ ನನ್ನ ತಂದೆ-ತಾಯಿ ನನಗೆ ಮನೆಗೆ ಬಂದಿರುವುದಿಲ್ಲ. ಮಗುವನ್ನು ನಾವು ಕಾನ್ವೆಂಟ್‌ಗೆ ಸೇರಿಸಿದ್ದೆವು, ಆದರೆ ಆರೋಪಿಯು ಶಾಲಾ ಶುಲ್ಕ ಪಾವತಿಸದ ಕಾರಣ ಕಾನ್ವೆಂಟ್ ಅನ್ನು ಬಿಡಿಸಿ ಮನೆಗೆ ಕರೆದುಕೊಂಡು ಹೋಗಿರುತ್ತೇನೆ. ಇದೇ ರೀತಿ ಆರೋಪಿ ಬಾಡಿಗೆ ಹಣ ನೀಡದೇ ಇದ್ದ ಕಾರಣ ಮತ್ತು ನನಗೂ ಸಹ ಬಾಡಿಗೆ ನೀಡಲು ಶಕ್ತಿ ಇಲ್ಲದೇ ಇದ್ದ ಕಾರಣ ನಾನು ನನ್ನ ತವರಿಗೆ ಹೋಗಿರುತ್ತೇನೆ. ನಾನು ನನ್ನ ತವರಿನಲ್ಲಿ ಇದ್ದರೂ ಸಹಃ ಆರೋಪಿಯು ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ. ನಂತರ ನಾನು ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ನೀಡಿರುತ್ತೇನೆ.

ನನ್ನ ಅಣ್ಣ ನನಗೆ ಹೊಡೆದ ಬೈದ ವಿಚಾರವನ್ನು ಪ್ರಶ್ನಿಸಿದ ಎಂಬ ಸಿಟ್ಟಿನಿಂದ ನನ್ನ ಅತ್ತೆ ಮತ್ತು ಮಾವ ಸೇರಿಕೊಂಡು ನನ್ನ ಅಣ್ಣನ ವಿರುದ್ಧ ರೇಪ್ ಕೇಸು ದಾಖಲು ಮಾಡಿರುತ್ತಾರೆ.

ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ಒಂದೆರಡು ದಿನಗಳ ನಂತರ, ಪೊಲೀಸರು ಗಲಾಟೆಯಾಗಿದ್ದ ಸಾಹಿತ್ಯ ನಗರದಲ್ಲಿನ ಬಾಡಿಗೆ ಮನೆಗೆ ಬಂದು ನಾನು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾಸಾ 2, 3 ರವರ ಸಮಕ್ಷಮ ಮಧ್ಯಾಹ್ನ 4 ರಿಂದ 5 ಗಂಟೆಯ ತನಕ ಮಹಜರ್ ಮಾಡಿ ನಕಾಶೆ ತಯಾರು ಮಾಡಿ ಪೋಟೋ ತೆಗೆದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ

ಮಹಜರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ2 ರ ಕಾಲದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3, 4 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

1 ನೇ ಆರೋಪಿಯು ಮದುವೆಯಾದ 4-5 ತಿಂಗಳ ನಂತರ ನನ್ನ ಜೊತೆ ಸರಿಯಾಗಿ ಮಾತನಾಡುತ್ತಿರಲಿಲ್ಲ ಹಾಗೂ ನೀನು ಚೆನ್ನಾಗಿ ಇಲ್ಲ ನೀನಗೆ ಕೆಲಸಗಳು ಬರುವುದಿಲ್ಲ ನೀನು ಧರಿದ್ರುದವಳು ನಮಗೆ ಮೋಸಮಾಡಿ ಮದುವೆ ಮಾಡಿರುತ್ತಾರೆ ಎಂದು ಚುಚ್ಚು ಮಾತುಗಳಿಂದ ಬೈಯುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯು ನನಗೆ ಕೈಗಳಿಂದ ಹೊಡೆಯುತ್ತಿದ್ದರು ಹಾಗೂ ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯು ಹೊಡೆದ ವಿಚಾರವನ್ನು 2 ಮತ್ತು 3 ನೇ ಆರೋಪಿತರಿಗೆ ನಾನು ತಿಳಿಸಿದರು ಸಹಃ ಅವರು ಸಹ 1 ನೇ ಆರೋಪಿಗೆ ಕುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿ. 2-3 ನೇ ಆರೋಪಿತರು ನೀನು ಇದನ್ನೆಲ್ಲಾ ಸಹಿಸಿಕೊಂಡು ಹೋಗಬೇಕು ಬೇವರ್ಸಿ ಮುಂಡೆ ಎಂದು ಬೈಯುತ್ತಿದ್ದರು ಎಂದರೆ ಸರಿ.

ನನ್ನ ಮೊದಲ ಹೆರಿಗೆಗೆ ನಾನು ತವರಿಗೆ ಹೋಗಿದ್ದೆ ಎಂದರೆ ಸರಿ. ನಮಗೆ 1 ಗಂಡು ಮಗು ಜನಿಸಿತು ಎಂದರೆ ಸರಿ. ಆ 1 ನೇ ಆರೋಪಿ ನನ್ನನ್ನು ಅಥವಾ ಮಗುವನ್ನು ನೋಡಲು ಬಂದಿರುವುದಿಲ್ಲ ಎಂದರೆ ಸರಿ. 1 ನೇ ಆರೋಪಿಯು ಈಗ ನನಗೆ ಹೆಂಡತಿ-ಮಗು ಬೇಕು ಎಂದು ಎಂ ಸಿ ಸಂ.11/2021 ರಂತೆ ಕಡೂರಿನ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ.

ಹಲವಾರು ಬಾರಿ ನನ್ನ ಮತ್ತು ಆರೋಪಿತರ ಸಂಬಂಧಿಕರು ಸೇರಿಕೊಂಡು ರಾಜೀ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿ. ರಾಜೀ ಮಾತುಕತೆಯಲ್ಲಿ ಆರೋಪಿತರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ ಕಾರಣ ದಿ:01.11.2021 ರಂದು ಎಂ.ಸಿ. ಕೇಸನ್ನು ವಾಪಾಸು ಪಡೆದಿರುತ್ತಾರೆ ಎಂದರೆ ಸರಿ. ನಂತರ ಕಡೂರಿನ ಸಾಹಿತ್ಯ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಟ್ಟರು ಎಂದರೆ ಸರಿ. ಬಾಡಿಗೆ ಮನೆಗೆ 1 ನೇ ಆರೋಪಿ ಸರಿಯಾಗಿ ಬರುತ್ತಿರಲಿಲ್ಲ ಹಾಗೂ ದಿನನಿತ್ಯ ಜೀವನಕ್ಕೆ ಬೇಕಾದ ವಸ್ತುಗಳನ್ನು ತಂದುಕೊಡುತ್ತಿರಲಿಲ್ಲ ಎಂದರೆ ಸರಿ. 1 ನೇ ಆರೋಪಿ 2-3 ನೇ ಆರೋಪಿತರ ಮಾತುಕೇಳಿ ನನಗೆ ಬೈಯುವುದು ಹೊಡೆಯುವುದು ಮಾಡುತ್ತಿದ್ದರು ಎಂದರೆ ಸರಿ. ಆಗ ನನಗೆ ತವರಿನವರೆ ಬೇಕಾದ ವಸ್ತುಗಳನ್ನು ತಂದುಕೊಡುತ್ತಿದ್ದರು ಎಂದರೆ ಸರಿ.

ದಿ:13.02.2023 ರಂದು ನನ್ನ ಅಣ್ಣ (ಚಾಸಾ6) ರವರು ನಾವು ಇದ್ದ ಬಾಡಿಗೆ ಮನೆಗೆ ಬಂದರು ಎಂದರೆ ಸರಿ. ಆಗ ನಾನು ಅಣ್ಣನಿಗೆ ಆರೋಪಿತರ ಹಿಂಸೆಯ ವಿಚಾರವನ್ನು ತಿಳಿಸಿರುತ್ತೇನೆ ಎಂದರೆ ಸರಿ. ಆಗ ನನ್ನ ಅಣ್ಣ 2-3 ನೇ ಆರೋಪಿತರು ಇದ್ದ ಮನೆಗೆ ಹೋಗಿ 1 ನೇ ಆರೋಪಿ ಹೀಗೆ ಮಾಡುತ್ತಿದ್ದಾನೆ ಎಂದು ತಿಳಿಸಿದಾಗ 2-3 ನೇ ಆರೋಪಿತರು ನಾನು ಇದ್ದ ಬಾಡಿಗೆ ಮನೆಗೆ ಸಂಜೆ 5.30 ಕ್ಕೆ ಬಂದರು ಎಂದರೆ ಸರಿ. ಆಗ ಮೂರು ಜನ ಆರೋಪಿತರು ಸೇರಿಕೊಂಡು ನೀನು ನಿನ್ನ ಅಣ್ಣನನ್ನು ಕಳುಹಿಸಿ ಗಲಾಟೆ ಮಾಡಿಸುತ್ತಿಯ ಎಂದು ಬೈದಿರುತ್ತಾರೆ ಎಂದರೆ ಸರಿ. ನೀನು ಹೀಗೆ ಮಾಡುತ್ತಿದದರೆ ನಿನ್ನನ್ನು ಸೀಮೆ ಎಣ್ಣೆ ಹಾಕಿ ಸುಟ್ಟು ಕೊಲ್ಲುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ದಿ:13.02.2023 ರಾತ್ರಿ 8 ಗಂಟೆಗೆ ನಾನು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದರೆ ಸರಿ. ನಂತರ ದಿ:17.02.2023 ರಂದು ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿ ಪೋಟೋ ತೆಗೆದು ಸಹಿ ಪಡೆದರು ಎಂದರೆ ಸರಿ.

<u>ಪಾಟೀ ಸವಾಲು: ಆರೋಪಿತರ ಪರ ಶ್ರೀ. ಕೆ ವಿ ಎಂ ವಕೀಲರಿಂದ:-</u>

2-3 ನೇ ಆರೋಪಿತರಿಗೆ ಹೆಣ್ಣುಮಕ್ಕಳು ಇಲ್ಲ ಎಂದರೆ ಸರಿ. ಮದುವೆಯ

ಮಾತುಕತೆಯು ಗಂಡನ ಮನೆಯಲ್ಲಿ ಆಗಿರುತ್ತದೆ. ಎಷ್ಟು ಜನ ಸೇರಿದ್ದರು ಎಂದು ನನಗೆ ಗೊತ್ತಿಲ್ಲ, ನಾನು ಹೋಗಿರಲಿಲ್ಲ. ಅಲ್ಲಿ ಏನು ಮಾತುಕತೆಯಾಗಿರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ನನ್ನ ತಂದೆಯವರು ಬಂದು ಹೇಳಿರುವಷ್ಟು ನನಗೆ ಗೊತ್ತಿರುತ್ತದೆ. ಆರೋಪಿತರು ರೂ.10 ಲಕ್ಷ ಕೇಳಿದರು ಎಂದು ನನ್ನ ತಂದೆ ನನಗೆ ಹೇಳಿರುತ್ತಾರೆ.

ಮದುವೆಯಲ್ಲಿ ನೀಡಿದ ಚಿನ್ನವನ್ನು ಬೀರೂರಿನಲ್ಲಿ ನನ್ನ ದೊಡ್ಡಪ್ಪನವರು ನಮ್ಮ ಪರವಾಗಿ ಮಾಡಿಸಿರುತ್ತಾರೆ. ಸದರಿ ಚಿನ್ನ ಖರೀದಿಸಿದ ಸಂಬಂಧ ಬಿಲ್ ಅನ್ನು ಪಡೆದುಕೊಂಡಿರಬಹುದು. ಸದರಿ ಬಿಲ್ ಗಳನ್ನು ಪೊಲೀಸರಿಗೆ ನೀಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಆರೋಪಿಯು ಕಡೂರಿನ ಕಾಲೇಜಿನ ಬಳಿ ಮೊದಲಿಗೆ ಒಂದು ಅತೀ ಸಣ್ಣ ಮನೆ ಮಾಡಿದ್ದರು. ಆ ನಂತರ ನಾವು ಚೆನ್ನಾಗಿ ಇದ್ದೆವು ಎಂದರೆ ಸರಿಯಲ್ಲ, ಆರೋಪಿ ಮನೆಗೆ ಬರುತ್ತಿರಲಿಲ್ಲ.

ನನ್ನ ಅಣ್ಣ(ಚಾಸಾ6) ರವರು ಆರೋಪಿತರ ಮನೆ ಬಳಿ ಬಂದು ನನ್ನ ತಂಗಿಯ ಹೆಸರಿಗೆ ರೂ.10 ಲಕ್ಷ ಹಣ ಡೆಪಾಸಿಟ್ ಇಡಬೇಕು ಎಂದು ಗಲಾಟೆ ಮಾಡಿದರು ಎಂದರೆ ಸರಿಯಲ್ಲ. ಹಾಗೂ ನನ್ನ ಅಣ್ಣ 2 ನೇ ಆರೋಪಿಯ ಬುಲೆಟ್ ಬೈಕ್ ಅನ್ನು ತೆಗೆದುಕೊಂಡು ಹೋದರು ಎಂದರೆ ಸರಿಯಲ್ಲ. ನಾವು ಮದುವೆಯ ಸಮಯದಲ್ಲಿ ನೀಡಿದ್ದ ಬೈಕ್ ಅನ್ನು ನನ್ನ ಅಣ್ಣ ಪೊಲೀಸ್ ಠಾಣೆಯಲ್ಲಿ ಇಟ್ಟನು. ಸದರಿ ಬೈಕ್ ಈಗ ನನ್ನ ಮನೆಯಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಬೈಕ್ 2 ನೇ ಆರೋಪಿ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ಅಣ್ಣ ಆರೋಪಿತರೊಂದಿಗೆ ಗಲಾಟೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾನೆ ಎಂದು ಆತನ ವಿರುದ್ಧ ಒಂದು ಕೇಸು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಒಂದು ಕೇಸು ನನ್ನ ಅಣ್ಣನ ಮೇಲೆ ನಡೆಯುತ್ತಿದೆ. ನನ್ನ ಅಣ್ಣ ಗಲಾಟೆ ಮಾಡಿದಾಗ ಆಸ್ತಿಯಲ್ಲಿನ ಪಾಲನ್ನು ನನ್ನ ಮಗನ ಹೆಸರಿಗೆ ಮಾಡಿ ನಂತರ ನನ್ನ ತಂಗಿಯ ಹೆಸರಿಗೆ ಮಾಡಬೇಕು ಇಲ್ಲವಾದರೆ ನಿಮ್ಮನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ, ನಾವು ಈ ವರೆಗೂ ಯಾವುದೇ ಪಾಲು ಕೇಳಿರುವುದಿಲ್ಲ.

ಆರೋಪಿತರು ಯಾವ ದಿನ ಹಾಗೂ ಎಷ್ಟು ಗಂಟೆಯಲ್ಲಿ ಹೊಡೆದರು ಎಂದು ಸಮಯ ನೆನಪಿಟ್ಟುಕೊಂಡಿಲ್ಲ. ಆರೋಪಿ ನನ್ನ ಕೈಗಳನ್ನು ಹಿಂದಕ್ಕೆ ತಿರುಚಿ ತಲೆಗೆ ಹೊಡೆದಿರುತ್ತಾರೆ. ಹಳೆಪೇಟೆಯಲ್ಲಿ ಗಲಾಟೆಯಾದಾಗ ತುಂಬಾ ಜನರು ಸೇರಿದ್ದರು. 2 ಬಾರಿ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಚಿಕಿತ್ಸೆ ಪಡೆದುಕೊಂಡ ಬಗ್ಗೆ ವೈದ್ಯರ ಚೀಟಿಯನ್ನು ಎಲ್ಲಿ ಇಟ್ಟಿರುತ್ತೇನೆ ಎಂದು ಈಗ ನೆನಪಿಲ್ಲ. ಆರೋಪಿತರು ಯಾವುದೇ ರೀತಿಯಾಗಿ ಹೊಡೆದಿಲ್ಲ ಬೈದಿಲ್ಲ ಎಂದರೆ ಸರಿಯಲ್ಲ.

ಸೀಮೆಎಣ್ಣೆ ಇತ್ತೀಚೆಗೆ ಸಿಗುತ್ತಿಲ್ಲ ಎಂದರೆ ಅವರು 3 ವರ್ಷಗಳ ಹಿಂದೆ ಹೇಳಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ವಕೀಲರು ಕಾಲವಕಾಶ ಕೋರಿದ್ದು**,** ಕಾಲವಕಾಶ ನೀಡಿ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.